ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು).—

ಅ) ಕೆಲವೊಂದು ಇಲಾಖೆಗಳ ಹಲವಾರು ಯೋಜನೆಗಳನ್ನು ಕಾರ್ಯಕ್ರಮಗಳನ್ನು ಜಿಲ್ಲಾ ಪರಿಷತ್ತಿಗೆ ಅನಂಷ್ಠಾನಕ್ಕಾಗಿ ವರ್ಗಾಯಿಸಲಾಗಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯಂತ್ ಮಸೂದೆಗಳಿಗೆ ತಿದ್ದುಪಡಿ ಮಾಡುವ ಬಗ್ಗೆ

೧೫೯. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).— ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್, ಪಶು ಸಂಗೋಪನೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಈಗಿರುವ ಜಿಲ್ಲಾ ಪರಿಷತ್ ಮತ್ತು ಪಂಚಾಯತ್‌ರಾಜ್ ಮಸೂದೆಗಳಿಗೆ ಸರ್ಕಾರವು ತಿದ್ದುಪಡಿ ತರಲು ಯೋಚಿಸಿದೆಯೇ?

ಆ) ಯೋಚಿಸಿದ್ದರೆ ಯಾವ ಕಾಲಂಗಳ ಬಗ್ಗೆ ತಿದ್ದುಪಡಿ ತರಲಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು).—

ಅ) ಪರಿಶೀಲನೆಯಲ್ಲಿದೆ.

ಆ) ಉದ್ಭವಿಸುವುದಿಲ್ಲ.

ಮಂಗನ ಕಾಯಿಲೆ ತಡೆಗಟ್ಟುವ ಬಗ್ಗೆ

೧೪೦. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೆ.ಎಫ್.ಡಿ. ಕಾಯಿಲೆಗೆ ತುತ್ತಾಗಿ ಈ ವರ್ಷ ಎಷ್ಟು ಜನ ಸತ್ತಿದ್ದಾರೆ ?

ಆ) ಈ ಕಾಯಿಲೆಯನ್ನು ತಡೆಗಟ್ಟಲು ಸರ್ಕಾರ ಕ್ರಮ ತೆಗೆದುಕೊಂಡಿದೆಯೇ ?

ಶ್ರೀಮತಿ ಮನೋರಮಾ ಮಾಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು).—

ಅ) ಕೆ.ಎಫ್.ಡಿ. ಕಾಯಿಲೆಯಿಂದ ದಿನಾಂಕ ೨೪-೧೧-೧೯೮೯ ರಿಂದ ೧೫-೩-೧೯೦ರವರೆಗೆ ಒಟ್ಟು ೨೧ ಜನರು ಮೃತ ಪಟ್ಟಿರುತ್ತಾರೆ.

ಇದರ ವಿವರ ಈ ರೀತಿ ಇದೆ :

೧)	ಶಿವಮೊಗ್ಗ ಜಿಲ್ಲೆ ಶೀರ್ಥಹಳ್ಳಿ ತಾಲ್ಲೂಕಿನಲ್ಲಿ	೬ ಜನರು ಸತ್ತಿರುತ್ತಾರೆ.
೨)	ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾಲ್ಲೂಕಿನಲ್ಲಿ	೧೫ ಜನರು ಸತ್ತಿರುತ್ತಾರೆ.
	ಎರಡೂ ಜಿಲ್ಲೆಗಳ ಮೊತ್ತ	೨೧

ಆ) ಹೌದು.